ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಪರಿಶೀಲನೆಯಲ್ಲಿದೆ. ಸುಮಾರು ರೂ. ೪೮೫ ಲಕ್ಷ.

ಶ್ರೀ ಎಸ್. ಡಿ. ಜಯರಾಂ.— ಮಾನ್ಯ ಅಧ್ಯಕ್ಷರೇ, ಒಂದು ವರ್ಷದಿಂದಲೂ ಇದೇ ರೀತಿ ಮುಂದುವರಿಯುತ್ತಲೇ ಇದೆ. ಈಗಲಾದರೂ ಮಂಡ್ಯದ ಕೆರೆಯನ್ನು ಒಡೆದು ನಿವೇಶನಗಳನ್ನು ಮಾಡಿ ಮಂಡ್ಯ ನಗರ ಬೆಳೆಯುವುದಕ್ಕೆ ಅವಕಾಶ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಇದು ಅತ್ಯಂತ ಅವಶ್ಯಕವಾದಂಥ ಕೆಲಸವೆಂದು ಸರ್ಕಾರದ ಗಮನದಲ್ಲಿ ಇದೆ. ಇದರಲ್ಲಿ ಯಾವುದೇ ವಾದ-ವಿವಾದ ಇಲ್ಲ. ಈ ಕೆರೆ ಇರುವುದರಿಂದ ಮಂಡ್ಯ ನಗರ ಜನಕ್ಕೆ ಬಹಳ ತೊಂದರೆಯಾಗುತ್ತಿದೆ ಎಂಬುದಂ ಗೊತ್ತಿದೆ. ಈ ಕೆರೆಯನ್ನು ಒಡೆದು ಸೈಟುಗಳನ್ನು ಮಾಡಿ ಹಂಚಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಸೈಟುಗಳನ್ನು ಮಾಡುವ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್‌ರವರು ಗಮನ ಕೊಡಬೇಕಾಗುತ್ತದೆ. ಅದೂ ಅಲ್ಲದೆ ಈ ಕೆರೆಯ ಅಚ್ಚುಕಟ್ಟಿ ಪ್ರದೇಶದ ಜಮೀನುಗಳಿಗೆ ನೀರನ್ನು ಒದಗಿಸುವುದಕ್ಕೆ ಸುಮಾರು ೬೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಈಗಾಗಲೇ ಅಂದಾಜುಗಳನ್ನು ತಯಾರಿಸಲಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಹೆಚ್ಚಿನ ಕಳಕಳಿ ಇದೆ. ಹಾಗೂ ಈ ದಿಕ್ಕಿನಲ್ಲಿ ಕೆಲಸ ಮಾಡುವುದಕ್ಕೆ ನಿರ್ಣಯವನ್ನೂ ಸಹ ಮಾಡಿದ್ದೇವೆ. ಎರಡನೆಯದಾಗಿ ಆಲ್ಲಿ ಸೈಟುಗಳನ್ನು ವಿತರಣೆ ಮಾಡುವ ಕಾರ್ಯವನು ಇದೆ ಅದರ ಬಗ್ಗೆ ಹೆಚ್.ಯು.ಡಿ. ಮತ್ತು ನಮ್ಮ ಇಲಾಖೆಯವರು ಕುಳಿತು ಯೋಚನೆ ಮಾಡಬೇಕಾಗುತ್ತದೆ. ಆ ಕೆಲಸವನ್ನು ಹಂತ ಹಂತವಾಗಿ ಮಾಡಬೇಕಾಗುತ್ತದೆ.

ಆಳಂದ್ ತಾಲ್ಲೂಕಿನಲ್ಲಿ ಅಮರ್ಜ ನೀರಾವರಿ ಯೋಜನೆ

೧೫೫೫. ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗ ಜಿಲ್ಲೆ ಆಳಂದ್ ತಾಲ್ಲೂಕಿನ ಅಮರ್ಜ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಯಿತು ?

ಆ) ಈ ಯೋಜನೆಗೆ ವೆಚ್ಚವಾಗಿರುವ ಹಣವೆಷ್ಟು ?

ಇ) ಯೋಜನೆಯ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದು ನಿಜವಲ್ಲವೆ ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣವೇನು ?

ಉ) ಗುಲ್ಬರ್ಗ ಜಿಲ್ಲೆ ಪ್ರತಿವರ್ಷವೂ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಈ ಯೋಜನೆಯನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸುವುದು ಸಾಧುವಲ್ಲವೆ ?

ಊ) ಹಾಗಿದ್ದಲ್ಲಿ ಸರ್ಕಾರದವರು ಈ ಯೋಜನೆಗೆ ಸಾಕಷ್ಟು ಹಣ ಪ್ರಸಕ್ತ ಸಾಲಿನಲ್ಲಿ ಒದಗಿಸಿ ಯೋಜನೆಯನ್ನು ಪೂರ್ತಿಗೊಳಿಸಲು ಉದ್ದೇಶಿಸಿರುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೫ನೇ ಇಸವಿಯಲ್ಲಿ ಪ್ರಾರಂಭವಾಯಿತು.

ಆ) ೧೯೮೬ನೇ ಇಸವಿ ಜನವರಿ ಮಾಹೆ ಅಂತ್ಯದವರೆಗೆ ಖರ್ಚು ೪೫೮ ಲಕ್ಷ ರೂಪಾಯಿಗಳು

ಇ) ನಿಜ.

ಈ) ಈಗಾಗಲೇ ನೀರಾವರಿ ಸೌಲಭ್ಯವನ್ನೊದಗಿಸುವ ಹಂತದಲ್ಲಿರುವ ಯೋಜನೆಗಳ ಮೇಲೆ ಹೆಚ್ಚಿನ ಅನುದಾನ ನೀಡಿ ಉಪಯೋಗ ಪಡೆಯುವ ನಿಲುವು ಹಾಗೂ ರಾಜ್ಯದ ಹಣದ ಪರಿಸ್ಥಿತಿಗಳು ಮೂಲ ಕಾರಣಗಳು.

ಉ) ಅಹುದು.

ಊ) ಈ ಯೋಜನೆಯ ಕೆಲಸಗಳನ್ನು ತ್ವರಿತಗೊಳಿಸುವ ಉದ್ದೇಶದಿಂದ ೧೯೮೬-೮೭ ನೇ ಸಾಲಿನಲ್ಲಿ ಈ ಯೋಜನೆಗೆ ಕಳೆದ ಎರಡು ವರ್ಷಗಳಿಗಿಂತ ಹೆಚ್ಚಿನ ಅನುದಾನ ರೂ. ೫೦ ಲಕ್ಷ ನೀಡಲಾಗಿದೆ.

(ಮಾನ್ಯ ಸದಸ್ಯರಾದ ಶ್ರೀ ಶರಣಬಸಪ್ಪ ಮಾಲಿ ಪಾಟೀಲ್‌ರವರು ಸದನದಲ್ಲಿ ಹಾಜರಿಲ್ಲದೇ ಇದ್ದುದರಿಂದ ಇವರ ಪರವಾಗಿ ಮಾನ್ಯ ಸದಸ್ಯರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಪ್ರಶ್ನೆಯನ್ನು ಕೇಳಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೯೮೬-೮೭ ನೇ ಸಾಲಿಗೆ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ನಮಗೆ ಗೊತ್ತಿದೆ. ಆದರೆ ಇದುವರೆಗೂ ಈ ಯೋಜನೆಗೆ ಖರ್ಚಾಗಿರುವ ಒಟ್ಟು ಹಣ ಎಷ್ಟೂ ಹಾಗೂ ಇದರ ಟೋಟಲ್ ಎಸ್ಟಿಮೇಟ್ ಎಷ್ಟು ಮತ್ತು ಯಾವಾಗ ಈ ಯೋಜನೆಯನ್ನು ಕಂಪ್ಲೀಟ್ ಮಾಡುತ್ತೀರಾ ಎಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಇಲಾಖಾ ಸಚಿವರು).— ಇದುವರೆಗೂ ಈ ಯೋಜನೆಗೆ ಳಿಳಿ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮಿಾಡಿಯಂ ಪ್ರಾಜೆಕ್ಟ್‌ಸ್‌ಗಳೆಲ್ಲಾ ನಿದ್ರಾವಸ್ಥೆಯಲ್ಲೇ ಇರುವುದು ತಮಗೂ ಗೊತ್ತಿದೆ. ನಾನು ಮಂತ್ರಿಯಾದ ಮೇಲೆ ಈ ನಿದ್ರಾವಸ್ಥೆ ಬರಲಿಲ್ಲ. ಮೊದಲಿನಿಂದಲೂ ಇದೇ ರೀತಿ ಇದೆ. ಅಪ್ಪರ್ ಮುಲ್ಲಾಮಾರಿ ಯೋಜನೆ ಇರಬಹುದು, ಬೆಣ್ಣೆತೂರ ಯೋಜನೆ ಇರಬಹುದು ಯಾವುದೇ ಇರಲಿ ಒಟ್ಟಿನಲ್ಲಿ ಇರತಕ್ಕ ಮಿಾಡಿಯಂ ಪ್ರಾಜೆಕ್ಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಮಿಾಡಿಯಂ ಪ್ರಾಜೆಕ್ಟ್‌ಗಳಿಗೆ ಸ್ವಲ್ಪ ಚಾಲನೆ ಕೊಡಬೇಕೆಂದು ಕೆಲವು ಅಂದಾಜಂಗಳನ್ನು ಈಗಾಗಲೇ ಮಾಡಿದ್ದೇವೆ. ಟೆಂಡರುಗಳನ್ನು ಕರೆಯುವ ಬಗ್ಗೆಯೂ ನಿರ್ಣಯ ಮಾಡಿದ್ದೇವೆ. ಸರ್ಕಾರಕ್ಕೂ ಸಹ ಆದಷ್ಟು ಬೇಗ ಯೋಜನೆಗಳನ್ನು ಮುಗಿಸಬೇಕು ಎನ್ನುವ ಕಾಳಜಿ ಇದೆ ಎಂಬುದು ತಮಗೂ ಗೊತ್ತಿದೆ. ಅಲ್ಲಿ ಒಂದು ಶುಗರ್ ಫ್ಯಾಕ್ಟರಿ ಸಹ ತಯಾರಾಗುತ್ತಿದೆ. ಈ ಯೋಜನೆ ಪೂರ್ಣವಾಗದೇ ಇದ್ದರೆ ಶುಗರ್ ಫ್ಯಾಕ್ಟರಿ ಪ್ರಾರಂಭವಾಗುವುದಕ್ಕೂ ಕಷ್ಟವಾಗುತ್ತದೆ. ಆದುದರಿಂದ ನಾನು ಪ್ರಯತ್ನ ಮಾಡಿ ನಿಮ್ಮ ಮನಸ್ಸಿಗೆ ಸಮಾಧಾನ ಆಗುವ ರೀತಿಯಲ್ಲಿ ಕೆಲಸ ಮಾಡುತ್ತೇನೆ.

ಸಮಾಜ ಕಲ್ಯಾಣ ಇಲಾಖೆ ಕುರಿತು

೭೯೮. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸಕ್ತ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸರ್ಕಾರದವರು ನಿಗದಿಪಡಿಸಿದ ಹಣವೆಷ್ಟು ಹಾಗೂ ೧೯೮೫-೮೬ನೇ ಸಾಲಿನಲ್ಲಿ ಒಟ್ಟು ಖರ್ಚಾದ ಹಣವೆಷ್ಟು ?

ಆ) ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ?

ಇ) ಈಗ ಉಳಿದ ಹಣವೆಷ್ಟು ?

ಶ್ರೀ ವಿ.ಶ್ರೀವಿಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸಮಾಜ ಕಲ್ಯಾಣ ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ಅಂದರೆ ೧೯೮೫-೮೬ನೇ ಸಾಲಿನಲ್ಲಿ ೩೫ ಕೋಟಿ ೯೧ ಲಕ್ಷ ೯೩ ಸಾವಿರ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ೧೯೮೪-೮೫ ನೇ ಸಾಲಿನಲ್ಲಿ ೨೮,೦೨,೪೪,೧೧೭-೦೦ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಆ) ವಿವರಗಳ ಪಟಿ ಯನ್ನು ಲಗತ್ತಿಸಲಾಗಿದೆ.

ಇ) ಜಿಲ್ಲೆಗಳಿಗೆ ಒದಗಿಸಿ ಉಳಿದಿರುವ ಹಣ ೧೨ ಕೋಟಿ ೮೮ ಲಕ್ಷ ೪೦ ಸಾವಿರದ ನಾಲ್ಕುನೂರಾ ಒಂಭತ್ತು ರೂಪಾಯಿಗಳು.